# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಸಿ.ಸಿ ನಂ.1136-2020** **ಪಿ. ಡಬ್ಲುಃ 1**

| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎನ್.ಎಂ.ಜೀವನ್‌ಕುಮಾರ್<br>ನಂಜನಗೂಡು |
|---|---|
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 26-07-2022. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎಸ್.ಕೆ. ವಕೀಲರಿಂದಃ**

ನಾನು ಆರೋಪಿಗೆ ಸುಮಾರು 2 ಬಾರಿ ಸಾಲ ನೀಡಿರುತ್ತೇನೆ. ನಾನು 2017 ರಲ್ಲಿ ರೂ.10,000/- ಗಳನ್ನು ಒಂದು ಬಾರಿ ಮತ್ತು ರೂ.5,000/- ಗಳನ್ನು ಒಂದು ಬಾರಿ ನೀಡಿದ್ದೆನು. ನಾನು ಸದರಿ ವಿಚಾರವನ್ನು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಸದರಿ ವಿಚಾರವನ್ನು ನನ್ನ ಪಿರ್ಯಾದಿನಲ್ಲಿ ಹೇಳಿ ಬರೆಸಲು ನನಗೆ ತೊಂದರೆ ಇರಲಿಲ್ಲ. ನಾನು ಬೇರೆಯವರು ಬಳಿ ಸಾಲ ಪಡೆದಿದ್ದು ಸದರಿಯವರು ನನ್ನ ವಿರುದ್ಧ ಪಿರ್ಯಾದಿನ್ನು ದಾಖಲಿಸಿದ್ದು ಈ ಹಾಲಿ ಒಂದು ಪ್ರಕರಣ ಮುಕ್ತಾಯಗೊಂಡಿರುತ್ತದೆ. ನಾಗರಾಜು ರವರು ನನ್ನ ವಿರುದ್ಧ ರೂ.1,00,000/- ಗಳಿಗೆ ಚೆಕ್ ಬೌನ್ಸ್ ಪ್ರಕರಣ ಸಲ್ಲಿಸಿದ್ದು, ಸದರಿ ಪ್ರಕರಣವು ಮುಕ್ತಯಗೊಂಡಿರುತ್ತದೆ. ಹರ್ಷ ಫೈನಾನ್ಸ್‌ನವರು ನನ್ನ ವಿರುದ್ಧ ರೂ.1,00,000/- ಗಳಿಗೆ ಚೆಕ್ ಬೌನ್ಸ್ ಪ್ರಕರಣ ಸಲ್ಲಿಸಿದ್ದು, ಪ್ರಕರಣವು ಇನ್ನೂ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ. ಹೇಮಂತ್ ಎನ್ನುವವರು ನನ್ನ ವಿರುದ್ಧ ರೂ.2,50,000/- ಗಳಿಗೆ ಚೆಕ್ ಬೌನ್ಸ್ ಪ್ರಕರಣ ಸಲ್ಲಿಸಿದ್ದು ಪ್ರಕರಣವು ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ. ಶಿವಶಂಕರ್ ಎಂಬುವವರು ನನ್ನ ವಿರುದ್ಧ ರೂ.2,50,000/- ಗಳಿಗೆ ಚೆಕ್ ಬೌನ್ಸ್ ಪ್ರಕರಣವನ್ನು ದಾಖಲಿಸಿದ್ದು, ಅದು ಇನ್ನೂ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ.

2. ನಾನು ಆರೋಪಿ ನನಗೆ ನೀಡಿದ ಚೆಕ್ಕನ್ನು 2 ಬಾರಿ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ನಾನು ಮೊದಲ ಬಾರಿಗೆ ಚೆಕ್ಕನ್ನು ಜನವರಿ ತಿಂಗಳಲ್ಲಿ ಹಾಜರುಪಡಿಸುವಂತೆ ತಿಳಿಸಿದ್ದು, ನಂತರ

ಮಾರ್ಚ್ ನಲ್ಲಿ ಹಾಜರುಪಡಿಸುವಂತೆ ತಿಳಿಸಿರುತ್ತಾರೆ. ನಾನು ಚೆಕ್ಕನ್ನು ಬ್ಯಾಂಕಿಗೆ ಹಾಜರು ಮಾಡಿಸಿದ ದಿನಾಂಕ ನನಗೆ ನೆನಪಿಲ್ಲ. ಮೊದಲ ಬಾರಿಗೆ ಚೆಕ್ ಬೌನ್ಸ್ ಆದಾಗ ಆರೋಪಿ ನನ್ನನ್ನು ಭೇಟಿ ಆಗಿ ಪುನಃ ಮಾರ್ಚ್ ತಿಂಗಳಲ್ಲಿ ಚೆಕ್ಕನ್ನು ಹಾಜರುಪಡಿಸುವಂತೆ ತಿಳಿಸಿದರು. ಆರೋಪಿಯು ನೇರವಾಗಿ ನನ್ನನ್ನು ಹಲ್ಲಹಳ್ಳಿ ಸರ್ಕಲ್ ನಲ್ಲಿ ಭೇಟಿ ಮಾಡಿದ್ದರು. ಆ ಸಮಯ ನನ್ನೊಂದಿಗೆ ಯಾರು ಇರಲಿಲ್ಲ. ನನಗೆ ಆರೋಪಿ ತಂದೆ ಹೆಸರು ಗೊತ್ತಿಲ್ಲ. ನನ್ನ ಪಿರ್ಯಾದಿನಲ್ಲಾಗಿ, ನೋಟಿಸ್‌ನಲ್ಲಾಗಲಿ ಯಾವಾಗ ಸಾಲ ಪಡೆದರು ಎಂದು ನಿಖರವಾಗಿ ಹೇಳಿಲ್ಲ ಎಂದರೆ ಸರಿ. ನಾನು ಆರೋಪಿಗೆ ಸಾಲ ನೀಡದೇ ಇರುವುದರಿಂದ ದಿನಾಂಕವನ್ನು ನಿಖರವಾಗಿ ಹೇಳಲು ಸಾಧ್ಯವಾಗುತ್ತಿಲ್ಲ ಎಂದರೆ ಸರಿಯಲ್ಲ. ಈ ಮೊದಲು ನಾನು ಆರೋಪಿಗೆ ಸಾಲ ನೀಡಿದಾಗ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ.  ನಾನು ಆರೋಪಿಗೆ ಸಾಲ ನೀಡಿದ ದಿನದಂದು ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಪೈಂಟ್ ಅಂಗಡಿಯಲ್ಲಿ ಕೆಲಸ ಮಾಡುತ್ತೇನೆ. ನನಗೆ ತಿಂಗಳಿಗೆ ರೂ.30,000/- ಆದಾಯವಿರುತ್ತದೆ. ನನಗೆ ತಿಂಗಳಿಗೆ ರೂ.30,000/- ಆದಾಯ ಇದ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.  ಈ ದಾವೆಯನ್ನು ಸಲ್ಲಿಸುವ ಮೊದಲಿಗೆ ನನಗೆ ಸೇರಿದ ಸ್ವಂತ ಪೈಂಟ್ ಅಂಗಡಿ ಇತ್ತು. ಸದರಿ ಅಂಗಡಿಗೆ ಸಂಬಂಧಿಸಿದ ದಾಖಲಾತಿಗಳು ಇರುತ್ತವೆ. ಸದರಿ ದಾಖಲೆಗಳನ್ನು ನಾನು ನ್ಯಾಯಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅವುಗಳನ್ನು ಹಾಜರುಪಡಿಸಿಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನನಗೆ ಆರೋಪಿಗೆ ಸಾಲವಾಗಿ ನೀಡುವಷ್ಟು ಆರ್ಥಿಕ ಚೈತನ್ಯ ಇರುವುದಿಲ್ಲ, ನನಗೆ ಈ ಹಿಂದೆ ಪೈಂಟ್ ಅಂಗಡಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ವಿರುದ್ಧವೇ ಹಲವಾರು ಚೆಕ್ ಬೌನ್ಸ್ ಪ್ರಕರಣಗಳು ಇರುವುದರಿಂದ ನಾನು ಆರೋಪಿಗೆ ಹಣ ನೀಡುವಷ್ಟು ಆರ್ಥಿಕ ಚೈತನ್ಯ  ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣಗಳು ಚೀಟಿ ವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣಗಳಾಗಿರುತ್ತವೆ ಎಂದು ನುಡಿಯುತ್ತಾರೆ. ಹರ್ಷ ಪೈನಾನ್ಸ್‌ನವರು ಹಣ ಪಡೆದರೆ ಮಾತ್ರ ಪ್ರಕರಣ ದಾಖಲಿಸುತ್ತಾರೆ ಎಂದರೆ ಸರಿ. ನನ್ನ ವಿರುದ್ಧ ಇರುವ ಉಳಿದ ಪ್ರಕರಣಗಳು ಚೀಟಿ ವ್ಯವಹಾರಕ್ಕೆ ಸಂಬಂಧಿಸಿದ್ದವು ಎಂದು ನಾನು ನೋಟಿಸ್ ಗೆ ಪ್ರತ್ಯುತ್ತರವನ್ನು ನೀಡಿರುವುದಿಲ್ಲ. ಪೈಂಟ್ ಕೆಲಸವನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ವ್ಯವಹಾರ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ನಾನು ಪೈಂಟ್ ಕಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತೇನೆ,

ಆದರೆ ನನ್ನ ಬಳಿ ಲೈಸೆನ್ಸ್ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಪೈಂಟ್ ಕಂಟ್ರಾಕ್ಟರ್ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಪರವಾನಗಿ ಇದ್ದಲ್ಲಿ ಪೈಂಟ್ ಕಂಟ್ರಾಕ್ಟರ್ ಕೆಲಸ ನೀಡಲಾಗುತ್ತದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**